ಶಿಡ್ಲಘಟ್ಟ ತಾಲ್ಲೂಕು ಹಂತದ ರಜಾ ಅವಧಿಯ ಪುನರಾವರ್ತನ ಅಭ್ಯಾಸ ಪತ್ರಿಕೆ – 2

ತರಗತಿ: 10 ವಿಷಯ: ಸಮಾಜ ವಿಜ್ಞಾನ ಗರಿಷ್ಠ ಅಂಕಗಳು : 40

ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ನೀಡಲಾಗಿದೆ ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ಮೂರನೆಯ ಆಂಗ್ಲೋ-ಮೈಸೂರು ಯುದ್ಧ ಕೊನೆಗೊಂಡ ಒಪ್ಪಂದ.
 ಎ) ಮದ್ರಾಸ್ ಒಪ್ಪಂದ ಬಿ) ಮಂಗಳೂರು ಒಪ್ಪಂದ ಸಿ) ಶ್ರೀರಂಗ ಪಟ್ಟಣ ಒಪ್ಪಂದ ಡಿ) ಸಲ್ಬಾಯ್ ಒಪ್ಪಂದ
2. ಧಾರವಾಡದ ಕಲೆಕ್ಟರ್ ಮತ್ತು ಪೊಲಿಟಿಕಲ್ ಏಜೆಂಟನಾಗಿದ್ದವನು ಯಾರು?
 ಎ) ಕರ್ನಲ್ ಡೀಕ್ ಬಿ) ಪುಟ್ಟ ಬಸಪ್ಪ ಸಿ) ಕಲ್ಯಾಣ ಸ್ವಾಮಿ ಡಿ) ಥ್ಯಾಕರೆ
3. ದೋಂಡಿಯಾ ಜನಿಸಿದ ಸ್ಥಳ ________
 ಎ) ಶಿವಮೊಗ್ಗ ಬಿ) ಚನ್ನಗಿರಿ ಸಿ) ಶಿಕಾರಿಪುರ ಡಿ) ಕೋನಗಲ್
4. ಈ ಕೆಳಗಿನವುಗಳಲ್ಲಿ ಸರಿಯಾಗಿ ಹೊಂದಾಣಿಕೆ ಯಾಗದ ಗುಂಪು.
 ಎ) ಅನಿಬೆಸೆಂಟ್-ಬನಾರಸ್ ಹಿಂದೂ ವಿಶ್ವವಿದ್ಯಾಲಯ ಬಿ) ರಾಜಾರಾಮ ಮೋಹನ್ ರಾಯ್-ವೇದಾಂತ ಕಾಲೇಜು
 ಸಿ) ದಯಾನಂದ ಸರಸ್ವತಿ-ಮರಾಠ ವೇದಿಕ್ ಕಾಲೇಜು
 ಡಿ) ಸಯ್ಯದ್ ಆಹಮದ್ ಖಾನ್-ಮಹಮದನ್ ಆಂಗ್ಲೋ-ಓರಿಯರು ಕಾಲೇಜು
5. ಈ ಕೆಳಕಂಡ ನದಿಯಿಂದ ತಿಲೈಯಾ ಅಣೆಕಟ್ಟು ಯೋಜನೆ ನಿರ್ಮಾಣಗೊಂಡಿದೆ.
 ಎ) ಮಹಾನದಿ ಬಿ) ಸಟ್ಲೇಜ್ ಸಿ) ರಿಹಾಂಡ್ ಡಿ) ದಾಮೋದರ
6. "ಭಾರತದ ನೈಜ ಅಭಿವೃದ್ಧಿಯೆಂದರೆ ಗ್ರಾಮಗಳ ಅಭಿವೃದ್ಧಿ" ಎಂದು ಹೇಳಿದವರು.
 ಎ) ಡಾ॥ ಬಿ ಆರ್ ಅಂಬೇಡ್ಕರ್ ಬಿ) ಮಹಾತ್ಮ ಗಾಂಧೀಜಿ ಸಿ) ಜವಹಾರಲಾಲ್ ನೆಹರು ಡಿ. ಲಾಲ್‌ಬಹದ್ದೂರ್‌ಶಾಸ್ತ್ರಿ
7. ಆಫ್ರಿಕಾದ ಗಾಂಧೀ ಎಂದು ಪ್ರಸಿದ್ಧರಾದವರು.
 ಎ) ನೆಲ್ಸನ್ ಮಂಡೇಲಾ ಬಿ) ಕೋಫಿ ಅನ್ನಾನ್ ಸಿ) ಮಹಾತ್ಮ ಗಾಂದೀಜಿ ಡಿ) ಪೀಟರ್ ಮಂಡೇಲಾ
8. ಹೈದರಾಲಿಯು ಸಂಪೂರ್ಣವಾಗಿ ಪರಾಭವಗೊಂಡ ಯುದ್ಧ ________
 ಎ) ಸೋಲಿಂಗೂರ್ ಬಿ) ಪುಲಿಕಾಟ್ ಸಿ) ಪೋರ್ಟೋನೋವೆ ಡಿ)ಬಿದನೂರು
9. ಇವರ ಸಲಹೆಯಂತೆ ಹತ್ತನೇ ಚಾಮರಾಜ ಒಡೆಯರ್ ಅಸ್ಪೃಶ್ಯ ವರ್ಗದ ಮಕ್ಕಳಿಗೆ ಶಾಲೆಗಳನ್ನು ಪ್ರಾರಂಬಿಸಿದರು.
 ಎ) ರಾಮಕೃಷ್ಣ ಪರಮಹಂಸ ಬಿ) ಸ್ವಾಮಿ ವಿವೇಕಾನಂದ ಸಿ) ದಯಾನಮದ ಸರಸ್ವತಿ ಡಿ) ಜ್ಯೋತಿ ಬಾಪುಲೆ
10. ಇಂದು ಭಾರತದಲ್ಲಿ ಹೆಚ್ಚು ಪ್ರಚಲಿತಗೊಂಡಿರುವ ನೀರಾವರಿ.
 ಎ) ಬಾವಿ ನೀರಾವರಿ ಬಿ) ಕಾಲುವೆ ನೀರಾವರಿ ಸಿ) ಕೆರೆ ನೀರಾವರಿ ಡಿ) ಹನಿ ನೀರಾವರಿ
11. ನಾರಾಯಣಗುರು ಮತ್ತು ಅವರ ಅನುಯಾಯಿಗಳು ಶಿವ ದೇವಾಲಯ ಪ್ರವೇಶ ಚಳುವಳಿಯನ್ನು ಹೀಗೆನ್ನುತ್ತಾರೆ.
 ಎ) ಶುದ್ಧಿ ಚಳುವಳಿ ಬಿ) ಹೋಮ್ ರೋಲ್‌ಲೀಗ್ ಸಿ) ಧರ್ಮ ಪರಿಪಾಲನಾ ಯೋಗಂ ಡಿ) ವೈಕಂ ಸತ್ಯಾಗ್ರಹ
12. ಈ ಕೆಳಗಿನ ಯಾವ ನದಿಯು ಉತ್ತರ ಪ್ರದೇಶದ ಪ್ರಮುಖ ವಿವಿಧೋದ್ದೇಶ ನದಿ ಕಣಿವೆ ಯೋಜನೆಯಾಗಿದೆ.
 ಎ) ಕೋಸಿ ಬಿ) ರಿಹಾಂಡ್ ಸಿ) ಭಾಕ್ರ-ನಂಗಲ್ ಡಿ) ದಾಮೋದರ
13. ಅಲಿಪ್ತ ನೀತಿ ಎಂದರೆ.
 ಎ) ಜಗತ್ತಿನ ಯಾವ ಶಕ್ತಿ ಬಣಕ್ಕೂ ಸೇರದೆ ಸ್ವತಂತ್ರ ನೀತಿಯನ್ನು ಅನುಸರಿಸುವುದು
 ಬಿ) ಅಮೆರಿಕಾ ಸಂಯುಕ್ತ ಸಂಸ್ಥಾನ ನೇತೃತ್ವದ ಪ್ರಜಾಪ್ರಭುತ್ವ ರಾಷ್ಟ್ರಗಳ ಗುಂಪಿಗೆ ಸೇರುವುದು
 ಸಿ) ಸೋವಿಯತ್ ರಷ್ಯಾ ಹಿರಿತನದ ಕಮ್ಯುನಿಸ್ಟ್ ಗುಂಪಿಗೆ ಸೇರುವುದು
 ಡಿ) ಎರಡು ಶಕ್ತಿ ಬಣಗಳನ್ನು ವಿರೋದಿಸುವುದು
14. ಕಾರ್ಲ್‌ಮಾರ್ಕ್ಸ್ ಪ್ರಕಾರ ಶ್ರಮ ವಿಭಜನೆ ಎಂದರೆ.
 ಎ) ಕಡಿಮೆ ಕೌಶಲ್ಯವಿರುವ ಕೆಲಸಗಾರರನ್ನು ನಿರ್ಮಿಸುತ್ತದೆ
 ಬಿ) ಹೆಚ್ಚು ಕೌಶಲ್ಯವಿರುವ ಕೆಲಸಗಾರರನ್ನು ನಿರ್ಮಿಸುತ್ತದೆ
 ಸಿ) ಸಂಘಟಿತ ಕೆಲಸಗಾರರು
 ಡಿ) ಅಸಂಘಟಿತ ಕೆಸಲಗಾರರು
15. ಸಾಮಾನ್ಯವಾಗಿ ಈ ಖಾತೆಯು ಭವಿಷ್ಯಕಾಲದಲ್ಲಿ ಯಾವುದಾದರೂ ಒಂದು ನಿರ್ದಿಷ್ಟ ದಿನದಂದು ಹಿಂದಕ್ಕೆ ಪಡೆಯಲು ತೆಲೆಯಲ್ಪಡುತ್ತದೆ.

PRASANTH KUMAR ROYAL'S, M.A, B.Ed, D.Ed

ಎ) ಉಳಿತಾಯ ಖಾತೆ ಬಿ) ಚಾಲ್ತಿ ಖಾತೆ ಸಿ) ಆವರ್ತಠೇವಣಿ ಖಾತೆ ಡಿ) ನಿಶ್ಚಿತ ಠೇವಣಿ ಖಾತೆ

16. ಬ್ಯಾಂಕುಗಳ ತಾಯಿ ಎಂದು ಕರೆಯಲ್ಪಡುವ ಬ್ಯಾಂಕು.

ಎ) ಸ್ಟೇಟ್ ಬ್ಯಾಂಕ್ ಬಿ) ರಿಜರ್ವ್ ಬ್ಯಾಂಕ್ ಸಿ) ಕರ್ನಾಟಕ ಬ್ಯಾಂಕ್ ಡಿ) ಪಂಜಾಬ್ ನ್ಯಾಷನಲ್ ಬ್ಯಾಂಕ್

17. ಕಿಸಾನ್ ವಿಕಾಸ ಪತ್ರಗಳನ್ನು ವಿತರಿಸುವ ಸಂಸ್ಥೆ ________

ಎ) ಸೆಂಟ್ರಲ್ ಬ್ಯಾಂಕ್ ಬಿ) ಅಂಚೆ ಇಲಾಖೆ ಸಿ) ಸಹಕಾರಿ ಬ್ಯಾಂಕಗಳು ಡಿ) ಗ್ರಾಮೀಣ ಅಭಿವೃದ್ಧಿ ಬ್ಯಾಂಕು

18. ಲ್ಯಾಟರೈಟ್ ಮಣ್ಣು ಕೃಷಿಗೆ ಅಷ್ಟೊಂದು ಉಪಯುಕ್ತವಲ್ಲ ಏಕೆ?

ಎ) ಅಧಿಕ ಉಷ್ಣಾಂಶ ಮತ್ತು ಅಧಿಕ ಮಳೆ ಬೀಳುವ ಪರಿಸ್ಥಿತಿಯಿಂದ ನಿರ್ಮಾಣಗೊಂಡಿದೆ

ಬಿ) ತೇವಾಂಶ ಸಂಗ್ರಹದ ಸಾಮರ್ಥ್ಯ ಕಡಿಮೆ

ಸಿ) ಫಲವತ್ತತೆಯನ್ನು ಹೊಂದಿಲ್ಲ ಡಿ) ಮೇಲಿನ ಎಲ್ಲವೂ ಸರಿಯಾಗಿದೆ

19. ಈ ಕೆಳಗಿನವುಗಳಲ್ಲಿ ಯಾರು ಅಸಂಘಟಿತ ವಲಯಕ್ಕೆ ಸೇರುತ್ತಾರೆ.

ಎ) ಖಾಸಗಿ ಕಂಪನಿ ಉದ್ಯೋಗಿಗಳು ಬಿ) ಪೋಲಿಸ್ ಸಿ) ಬೀಡಿ ಕಾರ್ಮಿಕರು ಡಿ) ಜೀವ ವಿಮಾ ಕಂಪನಿಗಳು

20. ಈ ಕೆಳಗಿನ ಯಾವ ಖಾತೆದಾರರು ಹಣವನ್ನು ದಿನಕ್ಕೆ ಎಷ್ಟು ಬಾರಿಯಾದರೂ ತುಂಬ ಬಹುದು ಮತ್ತು ಎಷ್ಟು ಬಾರಿಯಾದರೂ ಪಡೆಯಬಹುದು.

ಎ) ಉಳಿತಾಯ ಖಾತೆ ಬಿ)ಚಾಲ್ತಿ ಖಾತೆ ಸಿ) ಆವರ್ತ ಠೇವಣಿ ಖಾತೆ ಡಿ)ನಿಶ್ಚಿತ ಠೇವಣಿ ಖಾತೆ

21. ಭಾರತದಲ್ಲಿ ಉಕ್ಕಿನ ಕಾರ್ಖಾನೆಗಳನ್ನು ತೆರೆಯಲು ಸಹಕರಿಸಿದ ದೇಶ.

ಎ) ರಷ್ಯಾ ಬಿ) ಅಮೇರಿಕ ಸಿ) ಚೀನಾ ಡಿ) ಇಂಗ್ಲೇಂಡ್

22. ಪರಿಚಶೀಲ ತತ್ವಗಳಿಗೆ ಸಹಿ ಹಾಕಿದವರು.

ಎ) ಜವಹಾರಲಾಲ್ ನೆಹರು ಮತ್ತು ಮೋಜಿ ಬಿ) ಮೋತಿಲಾಲ್ ನೆಹರು ಮತ್ತು ಚೌ.ಎನ್ ಲಾಯ್

ಸಿ) ಜವಹಾರಲಾಲ್ ನೆಹರು ಮತ್ತು ಚೌ.ಎನ್ ಲಾಯ್ ಡಿ) ಮೋತಿಲಾಲ್ ನೆಹರು ಮತ್ತು ಚಾಚಾ ನೆಹರು

23. ವಲಸೆಯ ಪ್ರಮುಖ ಲಕ್ಷಣ ಕಂಡು ಬರುವುದು ________

ಎ) ಸಂಘಟಿತ ವಲಯದಲ್ಲಿ ಬಿ) ಅಸಂಘಟಿತ ವಲಯದಲ್ಲಿ

ಸಿ) ಬಾಲಕಾರ್ಮಿಕರಲ್ಲಿ ಡಿ) ಮಹಿಳಾ ಕಾರ್ಮಿಕರಲ್ಲಿ

24. ಆಶ್ರಯ ಯೋಜನೆಯನ್ನು ಅನುಷ್ಠಾನಗೊಳಿಸಿರುವುದು.

ಎ) ಉದ್ಯೋಗ ಕಲ್ಪಿಸಲು ಬಿ) ಮನೆಗಳನ್ನು ನಿರ್ಮಿಸಲು

ಸಿ) ವ್ಯವಸಾಯ ಭೂಮಿಕಲ್ಪಿಸಲು ಡಿ) ಶಿಕ್ಷಣ ಕಲ್ಪಿಸಲು

25. ಕಪ್ಪ ಮಣ್ಣು ಒಣ ಬೇಸಾಯಕ್ಕೆ ಸೂಕ್ತವಾಗಿದೆ ಏಕೆಂದರೆ.

ಎ) ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ಕಂಡುಬರುತ್ತದೆ

ಬಿ) ಕಡಿಮೆ ತೇವಾಂಶ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿದೆ

ಸಿ) ಹೆಚ್ಚು ತೇವಾಂಶ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿದೆ

ಡಿ) ಇದು ಸ್ಪಟಿಕ ಶಿಲೆಗಳ ಶಿಥಿಲೀಕರಣದಿಂದ ಕೂಡಿದೆ

26. ಬ್ರಿಟಿಷ್ ಇತಿಹಾಸಕಾರರು 1857 ರ ದಂಗೆಯನ್ನು ಹೀಗೆ ಕರೆದಿದ್ದಾರೆ.

ಎ) ಭಾತರದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಬಿ) ಮಹಾದಂಗೆ

ಸಿ) ಸಿಪಾಯಿದಂಗೆ ಡಿ) ಮೇಲಿನ ಯಾವುದು ಇಲ್ಲ

27. 1837 ದಂಗೆಯಲ್ಲಿ ಬ್ರಿಟೀಷ್ ಸೈನ್ಯದ ಅಧಿಕಾರಿಯೊಬ್ಬನನ್ನು ಕೊಂಡವನು ________

ಎ) ತಾತ್ಯಾ ಟೋಪೆ ಬಿ) ಮಂಗಳ ಪಾಂಡೆ ಸಿ) ನಾನಾಸಾಹೇಬ ಡಿ) ದೇತ ಪಾಂಡೆ

28. ಕಾನ್ಪುರದ ದಂಗೆಯ ನಾಯಕತ್ವ ವಹಿಸಿದವರು.

ಎ) ತಾತ್ಯಾ ಟೋಪೆ ಬಿ) ನಾನಾಸಾಹೇಬ ಸಿ) ಮಂಗಲ ಪಾಂಡೆ ಡಿ) ಎರಡನೇ ಬಹದ್ದೂರ್‌ಷಾ

29. ಝಾನ್ಸಿರಾಣಿ ಲಕ್ಷ್ಮಿಬಾಯಿ ಇಂಗ್ಲೀಷರ ವಿರುದ್ಧ ಯುದ್ಧಸಾರಿ ಈ ಕೆಳಗಿನ ಯಾವ ಪ್ರದೇಶ ವಶಕ್ಕೆ ಪಡೆದಳು.

ಎ) ಗ್ವಾಲಿಯರ್ ಬಿ) ದೆಹಲಿ ಸಿ) ಲಕ್ನೋ ಡಿ) ಉತ್ತರ ಪ್ರದೇಶ

30. 1857 ರ ದಂಗೆಯ ಸಂದರ್ಭದಲ್ಲಿ ಸಿಪಾಯಿಗಳು ಭಾರತದ ಚಕ್ರವರ್ತಿ ಎಂದು ಘೋಷಿಸಿಕೊಂಡಿದ್ದು________

ಎ) ನಾನಾಸಾಹೇಬ ಬಿ) ತಾತ್ಯಾ ಟೋಪಿ ಸಿ) ಎರಡನೇ ಬಹದ್ದೂರ್‌ಷಾ ಡಿ) ಷೇರ್‌ಷಾ

31. ಅತಿ ಹೆಚ್ಚು ಅರಣ್ಯ ಪ್ರದೇಶ : ಮಧು ಪ್ರದೇಶ :: ಅತಿ ಕಡಿಮೆ ಅರಣ್ಯ ಪ್ರದೇಶ ________

PRASANTH KUMAR ROYAL'S, M.A, B.Ed, D.Ed

ಎ) ಹರಿಯಾಣ ಬಿ) ಗೋವಾ ಸಿ) ಪಂಜಾಬ್ ಡಿ) ರಾಜಸ್ಥಾನ

32. ಖರ್ಜೂರಮರ : ಮರುಭೂಮಿ ಸಸ್ಯವರ್ಗ :: ಶ್ರೀಗಂಧ ________

ಎ) ಉಷ್ಣವಲಯದ ನಿತ್ಯ ಹರಿದ್ವರ್ಣದ ಕಾಡುಗಳು ಬಿ) ಉಷ್ಣವಲಯದ ಎಲೆ ಉದುರಿಸುವ ಕಾಡುಗಳು

ಸಿ) ಕುರುಚಲು ಸಸ್ಯವರ್ಗ ಡಿ) ಪರ್ವತ ಕಾಡುಗಳು

33. ಈ ಕೆಳಗಿನವುಗಳಲ್ಲಿ ಯಾವುದು ಅರಣ್ಯ ಸಂರಕ್ಷಣಾ ಕ್ರಮವಲ್ಲ.

ಎ) ಅರಣ್ಯನಾಶ ನಿಯಂತ್ರಣ ಬಿ) ಮೀತಿ ಮೀರಿ ಮೇಯಿಸುವುದನ್ನು ತಡೆಗಟ್ಟುವುದು

ಸಿ) ಕಾಡ್ಗಿಚ್ಚು ನಿಯಂತ್ರಣ ಡಿ) ಕೈಗಾರಿಕೀರಣ

34. ಈ ಕೆಳಗಿನವುಗಳಲ್ಲಿ ಯಾವುದು ಅರಣ್ಯನಾಶಕ್ಕೆ ಕಾರಣವಲ್ಲ.

ಎ) ಕೃಷಿ ಕ್ಷೇತ್ರದ ವಿಸ್ತರಣೆ ಬಿ) ರಸ್ತೆ ಮತ್ತು ರೈಲು ಮಾರ್ಗಗಳು

ಸಿ) ವೈಜ್ಞಾನಿಕವಾಗಿ ಮರಗಳನ್ನು ಕಡಿಯುವುದು ಡಿ) ನೀರಾವರಿ ಯೋಜನೆಗಳ ನಿರ್ಮಾಣ

35. ಅರಣ್ಯ, ವ್ಯವಸಾಯ, ಹುಲ್ಲುಗಾವಲು, ಇತ್ಯಾದಿ ಉದ್ದೇಶಗಳಿಗೆ ಭೂಮಿಯನ್ನು ಬಳಕೆ ಮಾಡುವುದು ________

ಎ) ಅರಣ್ಯ ಪ್ರದೇಶ ಬಿ) ಭೂ ಬಳಕೆ ಸಿ) ಸಾಳು ಭೂಮಿ ಡಿ) ನಿವ್ವಳ ಸಾಗುವಳಿ ಭೂಮಿ

36. ಮನುಷ್ಯನಿಗೆ ಅಗತ್ಯವಾದ ಆಹಾರ ದಾನ್ಯ ಮತ್ತು ಕಚ್ಚಾ ಪದಾರ್ಥಗಳನ್ನು ಪೂರೈಸಲು ಭೂಮಿಯನ್ನು ಉಳುಮೆ ಮಾಡುವುದನ್ನು ________

ಎ) ಅರಣ್ಯ ಪ್ರದೇಶ ಬಿ) ಕೈಗಾರಿಕೆ ಸಿ) ನೀರಾವರಿ ಡಿ) ವ್ಯವಸಾಯ

37. ವ್ಯಾಪಾರದ ಉದ್ದೇಶಕ್ಕಾಗಿ ಬೆಳೆಗಳನ್ನು ಬೆಳೆಯುವ ಕೃಷಿ ವಿಧಾನ ________

ಎ) ವಾಣಿಜ್ಯ ಬೇಸಾಯ ಬಿ) ಸಾಂದ್ರ ಬೇಸಾಯ

ಸಿ) ಮಿಶ್ರಣ ಬೇಸಾಯ ಡಿ) ನೆಡುತೋಪು ಬೇಸಾಯ

38. ಬೆಳಗಳ ಸಾಗುವಳಿ ಮತ್ತು ಸಳುಪಾಲನೆ ಜೊತೆ ಜೊತೆಯಾಗಿ ಸಾಗುವ ಕೃಷಿ ವಿಧಾನ.

ಎ) ಸಾಂದ್ರ ಬೇಸಾಯ ಬಿ) ಮಿಶ್ರಣ ಬೇಸಾಯ ಸಿ) ಒಣ ಬೇಸಾಯ ಡಿ) ನೀರಾವರಿ ಬೇಸಾಯ

39. ಅತಿ ಕಡಿಮೆ ಮಳೆ ಬೀಳುವ ಹಾಗೂ ನೀರಾವರಿ ಸೌಲಭ್ಯವಿಲ್ಲದ ಪ್ರದೇಶಗಳಲ್ಲಿ ರೂಢಿಯಲ್ಲಿರುವ ಬೇಸಾಯ ಪದ್ಧತಿ ________

ಎ) ಸಾಂದ್ರ ಬೇಸಾಯ ಬಿ) ಮಿಶ್ರಣ ಬೇಸಾಯ ಸಿ) ಆಹಾರ ಬೇಸಾಯ ಡಿ) ನೀರಾವರಿ ಬೇಸಾಯ

40. ಹಣ್ಣು, ತರಕಾರಿ, ಹೂವು, ಔಷದೀಯ ಮತ್ತು ಅಲಂಕಾರಿಕ ಬೆಳೆಗಳನ್ನು ತೋಟಗಳಲ್ಲಿ ಬೆಳೆಯುವುದನ್ನು ______

ಎ) ವಾಣಿಜ್ಯ ಬೆಳೆಗಳು ಬಿ) ಪುಷ್ಪ ಕೃಷಿ ಸಿ) ಆಹಾರ ಬೆಳೆಗಳು ಡಿ. ತೋಟಗಾರಿಕೆ

PRASANTH KUMAR ROYAL'S, M.A, B.Ed, D.Ed